# ಕರ್ನಾಟಕ ಸರ್ಕಾರ
## ಜಿಲ್ಲಾ ನಗರಾಭಿವೃದ್ಧಿ ಕೋಶ, ಚಿಕ್ಕಬಳ್ಳಾಪುರ
## ಇ – ಟೆಂಡರ್ ಪ್ರಕಟಣೆ (Standard Bidding Document K/W-2)

ಸಂ:ನಸಚಿ/ಟೆ.ಪ್ರ/ಎಸ್.ಎಫ್.ಸಿ./1/2011-12 ದಿನಾಂಕ: 01/06/2011

ಪೌರಾಯುಕ್ತರು, ನಗರಸಭೆ, ಚಿಕ್ಕಬಳ್ಳಾಪುರ ರವರು ಕರ್ನಾಟಕ ಪಾರದರ್ಶಕತೆ ಅಧಿನಿಯಮ 2000ರ ಪ್ರಕಾರ ಐಟಂವಾರು ಮೆ॥ ಕಿಯೋನಿಕ್ಸ್ ರವರ ಸಹಯೋಗದೊಂದಿಗೆ ಚಿಕ್ಕಬಳ್ಳಾಪುರ ನಗರ ವ್ಯಾಪ್ತಿಯಲ್ಲಿ 2010-11ನೇ ಸಾಲಿನ ಎಸ್.ಎಫ್.ಸಿ. ಯೋಜನೆಯಡಿಯಲ್ಲಿ ಈ ಕೆಳಗೆ ನಮೂದಿಸಿರುವ ವಿವಿಧ ಕಾಮಗಾರಿಗಳನ್ನು ಕೈಗೊಳ್ಳಲು ಲೋಕೋಪಯೋಗಿ ಇಲಾಖೆಯಲ್ಲಿ ನೋಂದಣಿ ಮಾಡಿಕೊಂಡ ಹಾಗೂ ಜಿಲ್ಲಾ ನಗರಾಭಿವೃದ್ಧಿ ಕೋಶ, ಚಿಕ್ಕಬಳ್ಳಾಪುರ ಜಿಲ್ಲೆ, ಚಿಕ್ಕಬಳ್ಳಾಪುರ ಇಲ್ಲಿ ಇ – ಟೆಂಡರ್‌ಗಾಗಿ ಎನ್‌ರೋಲ್ ಮಾಡಿಸಿಕೊಂಡಿರುವ ಅಧಿಕೃತ ಅರ್ಹ ದರ್ಜೆಯ ಗುತ್ತಿಗೆದಾರರಿಂದ ಐಟಂವಾರು ಇ – ಟೆಂಡರ್‌ಗಳನ್ನು ( ಇ-ಪ್ರೊಕ್ಯೂರ್‌ಮೆಂಟ್ ಪದ್ಧತಿ) ಆಹ್ವಾನಿಸಲಾಗಿದೆ. ಈ ಟೆಂಡರ್‌ಗಳಿಗಾಗಿ ಇಲಾಖಾ ವೆಬ್ ಸೈಟ್ www.tenderwizard.com/DUDCKB ಮೂಲಕ ಅರ್ಜಿಯನ್ನು ಸಲ್ಲಿಸಲು ಕೋರಲಾಗಿದೆ.

ಎಲ್ಲಾ ಟೆಂಡರ್‌ಗಳನ್ನು ಜಿಲ್ಲಾ ನಗರಾಭಿವೃದ್ಧಿ ಕೋಶ, ಚಿಕ್ಕಬಳ್ಳಾಪುರ, ಚಿಕ್ಕಬಳ್ಳಾಪುರ ಜಿಲ್ಲೆರವರು ಕಛೇರಿಯಲ್ಲಿ ಈ ಕೆಳಗೆ ಪ್ರಕಟಿಸಿದ ದಿನಾಂಕದಂದು ವಿತರಿಸಲಾಗುವುದು ಹಾಗೂ ಇದೇ ಕಛೇರಿಯಲ್ಲಿ ತೆರೆಯಲಾಗುವುದು.

| | | |
|---|---|---|
| 1 | ಇ – ಟೆಂಡರ್‌ಗಾಗಿ ಗುತ್ತಿಗೆದಾರರು ಅಂತರ್ಜಾಲದ ಮುಖಾಂತರ ಖಾಲಿ ಟಂಡರ್ ಫಾರಂಗಳಿಗೆ ಅರ್ಜಿ ಸಲ್ಲಿಸಲು ಪ್ರಾರಂಭದ ದಿನಾಂಕ | 6/6/2011 ರಂದು ಬೆಳಿಗ್ಗೆ 10.30 ಗಂಟೆಯಿಂದ |
| 2 | NEFT ಮುಖಾಂತರ ಖಾಲಿ ಟೆಂಡರ್ ಫಾರಂಗಳಿಗೆ ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ | 30/6/2011 ರಂದು ಸಂಜೆ 5.00 ಗಂಟೆಯವರೆಗೆ |
| 3 | ಗುತ್ತಿಗೆದಾರರಿಗೆ ಖಾಲಿ ಟೆಂಡರ್‌ಗಳನ್ನು ಅಂತರ್ಜಾಲದ ಮುಖಾಂತರ ನೀಡುವ ದಿನಾಂಕ | 1/7/2011 ರಿಂದ ಬೆಳಿಗ್ಗೆ 10.30 ಗಂಟೆಯಿಂದ |
| 4 | ಭರ್ತಿ ಮಾಡಿದ ಟೆಂಡರ್‌ಗಳನ್ನು ಅಂತರ್ಜಾಲದ ಮುಖಾಂತರ ನಮೂದಿಸುವ ಕಡೆಯ ದಿನಾಂಕ | 2/7/2011 ರಂದು ಸಂಜೆ 5.00 ಗಂಟೆಯವರೆಗೆ |
| 5 | ಸ್ವೀಕೃತವಾದ ಇ ಟೆಂಡರ್‌ಗಳನ್ನು ತೆರೆಯುವ ದಿನಾಂಕ | 4/7/2011 ರಂದು ಬೆಳಿಗ್ಗೆ 11.00 ಗಂಟೆಗೆ |
| **ಒಂದು ವೇಳೆ ಮೇಲೆ ಸೂಚಿಸಲಾಗಿರುವ ದಿನಗಳು ಸಾರ್ವಜನಿಕ ರಜಾದಿನಗಳನ್ನಾಗಿ ಘೋಷಿಸಲ್ಪಟ್ಟರೆ ಮುಂದಿನ ದಿನಗಳನ್ನು ಪರಿಗಣಿಸಲಾಗುವುದು** | | |

| ಕ್ರ. ಸಂ | ಕಾಮಗಾರಿಯ ಹೆಸರು | ಟೆಂಡರ್‌ಗಿಟ್ಟ ಮೊತ್ತ (ರೂ. ಲಕ್ಷಗಳಲ್ಲಿ) | ಗುತ್ತಿಗೆದಾರರು ನೀಡಬೇಕಾದ ಇ.ಎಂ.ಡಿ. | ಇ – ಟೆಂಡರ್ ಫಾರಂನ ಬೆಲೆ | ಅರ್ಹರಿರುವ ಗುತ್ತಿಗೆದಾರರ ದರ್ಜೆ | ಕಾಮಗಾರಿಯನ್ನು ಪೂರ್ಣಗೊಳಿಸಲು ನಿಗದಿಪಡಿಸಿದ ಅವಧಿ |
|---|---|---|---|---|---|---|
| 1 | 2 | 3 | 4 | 5 | 6 | 7 |
| 1 | ಪ್ಯಾಕೇಜ್ – 1<br>1. ಪರಿಶಿಷ್ಟ ಜಾತಿ ಕಾಲೋನಿಗಳಾದ ಬಾಪೂಜಿ ನಗರದ ಎ.ಕೆ.ಕಾಲೋನಿಯಲ್ಲಿ ಸಮುದಾಯ ಭವನ ನಿರ್ಮಿಸುವುದು<br>2. 12ನೇ ವಾರ್ಡ್ ನಲ್ಲಿ ಹಾಲಿ ನಿರ್ಮಿಸಿರುವ ಸಮುದಾಯ ಭವನಕ್ಕೆ ಹೆಚ್ಚುವರಿ ಕೊಠಡಿ ನಿರ್ಮಿಸಲು ಅನುದಾನ | 7.41 | 18,600/– | 2,350/– | 3ನೇ ದರ್ಜೆ | 3 ತಿಂಗಳು |
| 2 | ಪ್ಯಾಕೇಜ್ – 2<br>1. 20ನೇ ವಾರ್ಡ್ ವೆಂಕಟಪ್ಪ ಮನೆಯಿಂದ ಮುನಿಕೃಷ್ಣಪ್ಪ ಮನೆಯವರೆಗೆ ಸಿಮೆಂಟ್ ಕಾಂಕ್ರೀಟ್ ರಸ್ತೆ ನಿರ್ಮಾಣ<br>2. ಕೋಟೆ ಪರಿಶಿಷ್ಟ ವರ್ಗದ ಪ್ರದೇಶದ ರಸ್ತೆಗಳಿಗೆ ಸಿಮೆಂಟ್ ಕಾಂಕ್ರೀಟ್ ರಸ್ತೆ ನಿರ್ಮಾಣ | 3.86 | 9,650/– | 1,200/– | 3ನೇ ದರ್ಜೆ | 2 ತಿಂಗಳು |
| 3 | ಪ್ಯಾಕೇಜ್ – 3<br>1. ಕೋಟೆ ಪ್ರದೇಶದಲ್ಲಿ Pay and Use Type ಶೌಚಾಲಯ ನಿರ್ಮಾಣ | 6.75 | 16,875/– | 2,150/– | 3ನೇ ದರ್ಜೆ | 3 ತಿಂಗಳು |
| 4 | ಪ್ಯಾಕೇಜ್ – 4<br>1. ವಾರ್ಡ್ ನಂ 10ರಲ್ಲಿ ಉರ್ದು ಸ್ಕೂಲ್ ಟಿ.ಆಕಾರದ ರಸ್ತೆಯಲ್ಲಿ ಕಾಂಕ್ರೀಟ್ ರಸ್ತೆ ನಿರ್ಮಾಣ<br>2. ವಾರ್ಡ್ ನಂ14ರಲ್ಲಿ ಈಶ್ವರ ಗುಡಿಯಿಂದ ಅಯ್ಯಪ್ಪ ಸ್ವಾಮಿ ದೇವಸ್ಥಾನದವರೆಗೆ ನಾಲ್ಕು ಅಡಿ ಚರಂಡಿ ನಿರ್ಮಾಣ<br>3. ವಾರ್ಡ್ 8ರ ಟೆಲಿಫೋನ್ ಗಂಗಪ್ಪ ಮನೆಯಿಂದ ಮುನಿರಾಜು ಮನೆವರೆಗೆ ಸಿಮೆಂಟ್ ರಸ್ತೆ ಹಾಗೂ ಚರಂಡಿ ಮಾಡುವುದು<br>4. ವಾರ್ಡ್‌ನಂ 6ರ ಸ್ವೀಪರ್ಸ್ ಕಾಲೋನಿ ರಸ್ತೆ ಅಭಿವೃದ್ಧಿ<br>5. ವಾರ್ಡ್ ನಂ 8ರ ಮಟನ್ ಮೌಲಾ ಮನೆಯಿಂದ ಗಂಗಮ್ಮ ಮನೆವರೆಗೆ ಸಿಮೆಂಟ್ ರಸ್ತೆ ಹಾಗೂ ಚರಂಡಿ ಮಾಡುವುದು | 8.73 | 21,900/– | 2,730/– | 3ನೇ ದರ್ಜೆ | 3 ತಿಂಗಳು |

| | | | | | | |
|---|---|---|---|---|---|---|
| 5 | ಪ್ಯಾಕೇಜ್ – 5<br>1. ವಾರ್ಡ್ ನಂ 23ರ ವೈಶ್ಯ ಬ್ಯಾಂಕ್ ಹಿಂಭಾಗದ ರಸ್ತೆಗೆ ಕಾಂಕ್ರೀಟ್ ಹಾಕುವುದು<br>2. ವಾರ್ಡ್ ನಂ 24 ರ ಹೂವಿನ ಅಪ್ಪಣ್ಣಪ್ಪ ಗಲ್ಲಿಯಲ್ಲಿ ಕಾಂಕ್ರೀಟ್ ಹಾಕುವುದು<br>3. ವಾರ್ಡ್ 28ರ ವಾಚ್ ಮೇಕರ್ ಸೀನಪ್ಪ ಮನೆಯಿಂದ ಗಿಡ್ನಳ್ಳಿ ನಾರಾಯಣಸ್ವಾಮಿ ಮನೆವರೆಗೆ ಹಾಗೂ ಓ.ಪಿ.ಓ ರಸ್ತೆಯಿಂದ ಅನಿಫ್ ಮನೆವರೆಗೆ ಕಾಂಕ್ರೀಟ್ ರಸ್ತೆ ಮಾಡುವುದು<br>4. ವಾರ್ಡ್ ನಂ 31ರ ರಾಯಪ್ಪ ಮನೆ ರಸ್ತೆ ಮತ್ತು ಪಕ್ಕದ ರಸ್ತೆಯಲ್ಲಿ ಮೆಟ್ಲಿಂಗ್ ಮತ್ತು ಡಾಂಬರೀಕರಣ ಮಾಡುವುದು<br>5. 12ನೇ ವಾರ್ಡ್ ಮುನೇಶ್ವರ ದೇವಸ್ಥಾನದ ರಸ್ತೆಯಲ್ಲಿ ಕಾಂಕ್ರೀಟ್ ರಸ್ತೆ ನಿರ್ಮಾಣ | 8.55 | 21,250/– | 2,700/– | 3ನೇ ದರ್ಜೆ | 2 ತಿಂಗಳು |
| 6 | ಪ್ಯಾಕೇಜ್ – 6<br>1. ನಗರಸಭೆಯ ಹಾಲಿ ಕಟ್ಟಡ ದುರಸ್ಥಿ ಹಾಗೂ ರಸ್ತೆಗೆ ಸಿಮೆಂಟ್ ಹಾಕುವುದು | 6.25 | 15,700/– | 2,000/– | 3ನೇ ದರ್ಜೆ | 2 ತಿಂಗಳು |
| 7 | ಪ್ಯಾಕೇಜ್ – 7<br>1. 18ನೇ ವಾರ್ಡ್‌ನಲ್ಲಿ ಸಣ್ಣ ಸಣ್ಣ ರಸ್ತೆಗಳನ್ನು ಸಿಮೆಂಟ್ ರಸ್ತೆಗಳನ್ನಾಗಿ ಮಾಡುವುದು<br>2. ವಾರ್ಡ್ ನಂ 19ರ ಸಂಜೀವಯ್ಯ ಶೆಟ್ಟಿ ಡಿಪೋ ರಸ್ತೆ ಹಾಗೂ ಬಸವನ ಗುಡಿ ಪಕ್ಕದ ರಸ್ತೆಯನ್ನು ಸಿಮೆಂಟ್ ರಸ್ತೆ ಮಾಡುವುದು<br>3. ವಾರ್ಡ್ ನಂ 20ರಲ್ಲಿ ರಸ್ತೆ ಅಭಿವೃದ್ಧಿ<br>4. ವಾರ್ಡ್ ನಂ 17ರಲ್ಲಿ ಈಶ್ವರ ಗುಡಿ ರಸ್ತೆಯಲ್ಲಿ ಚರಂಡಿ ದುರಸ್ಥಿ ಮಾಡಿ ಸಿಮೆಂಟ್ ಸ್ಲಾಬ್ ಹಾಕುವುದು. | 9.74 | 24,350/– | 3,050/– | 3ನೇ ದರ್ಜೆ | 2 ತಿಂಗಳು |
| 8 | ಪ್ಯಾಕೇಜ್ – 8<br>1. ವಾರ್ಡ್ ನಂ 30ರಲ್ಲಿ ರಸ್ತೆ ಮತ್ತು ಚರಂಡಿ ನಿರ್ಮಾಣ<br>2. ವಾರ್ಡ್ ನಂ 13ನೇ ರಸ್ತೆ ಅಭಿವೃದ್ಧಿ<br>3. ವಾರ್ಡ್ ನಂ 12ರಲ್ಲಿ ಸ್ವೀಪರ್ಸ್ ಕಾಲೋನಿಯಲ್ಲಿ ರಸ್ತೆ ಅಭಿವೃದ್ಧಿ ಮತ್ತು ಚರಂಡಿ ನಿರ್ಮಾಣ<br>4. 7ನೇ ವಾರ್ಡ್ ನಿಮ್ಮಾಕಲ ಕುಂಟೆ ನಾಗಪ್ಪ ಮನೆಯಿಂದ ನಾರಾಯಣ ಮನೆವರೆಗೆ ಚರಂಡಿ ನಿರ್ಮಾಣ | 7.17 | 17,950/– | 2,250/– | 3ನೇ ದರ್ಜೆ | 2 ತಿಂಗಳು |

ಷರತ್ತುಗಳು:-

1. ಇ-ಟೆಂಡರ್ ದಾಖಲೆಗಳಿಗಾಗಿ ಕಡ್ಡಾಯವಾಗಿ ಆನ್‌ಲೈನ್ ಮುಖಾಂತರ ಕೋರಿಕೆ ಸಲ್ಲಿಸತಕ್ಕದ್ದು ಹಾಗೂ ನಿಗದಿ ಪಡಿಸಿದ ಇ.ಎಂ.ಡಿ. ಮೊತ್ತ ಹಾಗೂ ಇ-ಟೆಂಡರ್ ಪ್ರಕ್ರಿಯೆಯ ಟೆಂಡರ್ ಫಾರಂ ಮೊತ್ತವನ್ನು NEFT ಮುಖಾಂತರ / E-Payment ಮುಖಾಂತರ ಸಲ್ಲಿಕೆಯಾಗುವಂತೆ ಪಾವತಿ ಮಾಡತಕ್ಕದ್ದು.
2. ಮೇಲ್ಕಂಡಂತೆ ಪ್ರಕಟಿತ ಟೆಂಡರ್ ಕಾಮಗಾರಿಗಳು Standard Bidding Documents – KW2 ರ ಪ್ರಕಾರ ಷರತ್ತು ಹಾಗೂ ನಿಬಂಧನೆಗಳಿಗೆ ಒಳಪಟ್ಟಿರುತ್ತದೆ ಹಾಗೂ ಸಂಬಂದಿಸಿದ ಎಲ್ಲಾ ದಾಖಲೆಗಳನ್ನು Online ಮುಖಾಂತರ Upload ಮಾಡುವುದು.
3. ಟೆಂಡರ್ ಸಲ್ಲಿಸಿರುವ ಗುತ್ತಿಗೆದಾರರು ಟೆಂಡರ್ ಮೊತ್ತದ ಶೇ.50ರಷ್ಟು ಅಂದಾಜಿನ ಕಾಮಗಾರಿಗಳನ್ನು (ಕಾಮಗಾರಿಗೆ ಅನುಗುಣವಾಗಿ) ಹಿಂದಿನ 5 ವರ್ಷಗಳ ಅವಧಿಯ ಯಾವುದಾದರೂ 1 ವರ್ಷದಲ್ಲಿ ನಿರ್ವಹಿಸಿರಬೇಕು ಹಾಗೂ ಕೈಗೊಂಡ ಕಾಮಗಾರಿಯ ವಿವರಣೆಯನ್ನು ಪೌರಾಯುಕ್ತರು / ಸಹಾಯಕ ಕಾರ್ಯಪಾಲಕ ಅಭಿಯಂತರರು ರವರ ದರ್ಜೆಗೆ ಕಡಿಮೆ ಇಲ್ಲದಂತಹ ಅಧಿಕಾರಿಯ ದೃಢೀಕರಣ ಪತ್ರವನ್ನು ಸಲ್ಲಿಸಬೇಕು.
4. ಗುತ್ತಿಗೆದಾರರು ಟೆಂಡರ್‌ಗಿಟ್ಟ ಮೊತ್ತಕ್ಕಿಂತ ಕಡಿಮೆ ದರ ನಮೂದಿಸಿದ್ದಲ್ಲಿ, ನಮೂದಿಸಲ್ಪಟ್ಟ ಒಟ್ಟು ಹಾಗೂ ಟೆಂಡರ್‌ಗಿಟ್ಟ ಒಟ್ಟು ಮೊತ್ತದ ವ್ಯತ್ಯಾಸದ ಮೊತ್ತವನ್ನು ಡಿ.ಡಿ. ಮುಖಾಂತರ ಪೌರಾಯುಕ್ತರು, ನಗರಸಭೆ, ಚಿಕ್ಕಬಳ್ಳಾಪುರ ರವರ ಹೆಸರಿಗೆ ಪಡೆದು ಟೆಂಡರ್‌ಗಳನ್ನು ತೆರೆದ 2 ದಿನಗಳ ಒಳಗಾಗಿ ನೀಡತಕ್ಕದ್ದು, ಇಲ್ಲವಾದಲ್ಲಿ ಅಂತಹ ಗುತ್ತಿಗೆದಾರರನ್ನು ಅನರ್ಹರೆಂದು ಪರಿಗಣಿಸಲಾಗುವುದು.
5. ಷರತ್ತುಗೊಳನ್ನೊಳಗೊಂಡ (Conditional) ಟೆಂಡರ್‌ಗಳನ್ನು ತಿರಸ್ಕರಿಸಲಾಗುವುದು.
6. Standard Bidding Documents ನಿಯಮಾವಳಿಗಳ ಪ್ರಕಾರ ಅನುಮೋದಿತ ಗುತ್ತಿಗೆದಾರರು ಗುತ್ತಿಗೆ ಮೊತ್ತದ ಶೇ.5ರಷ್ಟು ಭದ್ರತಾ ಠೇವಣಿಯನ್ನು ಟೆಂಡರ್ ಕರಾರು ಸಮಯದಲ್ಲಿ ಪೌರಾಯುಕ್ತರು, ನಗರಸಭೆ, ಚಿಕ್ಕಬಳ್ಳಾಪುರ ರವರ ಹೆಸರಿಗೆ ಪಾವತಿಯಾಗುವಂತೆ ರಾಷ್ಟ್ರೀಕೃತ ಬ್ಯಾಂಕ್‌ನಿಂದ ಪಡೆದ ನಗದು/ಡಿ.ಡಿ./ಪೇ ಆರ್ಡ್‌ರ್/ಬ್ಯಾಂಕರ್ಸ್ ಚೆಕ್ ರೂಪದಲ್ಲಿ ಸಲ್ಲಿಸುವುದು ತಪ್ಪಿದ್ದಲ್ಲಿ ಟೆಂಡರ್‌ನ್ನು ತಿರಸ್ಕರಿಸಲಾಗುವುದು.
7. ಕಾಮಗಾರಿಯು ಪೂರ್ಣಗೊಂಡ ನಂತರ 2 ವರ್ಷಗಳವರೆಗೆ ನಿರ್ವಹಣೆಯ ಅವಧಿಯಿದ್ದು, ಎರಡು ವರ್ಷ ಮುಗಿದ ನಂತರ ಕಾಮಗಾರಿಯನ್ನು ಗುಣಮಟ್ಟ ಹಾಗೂ ತೃಪ್ತಿಕರವಾಗಿ ಪೂರೈಸಿರುವ ಬಗ್ಗೆ ಸಂಬಂಧ ಪಟ್ಟ ಅಧಿಕಾರಿಗಳಿಂದ ದೃಢೀಕರಣ ನಂತರವೇ ಭದ್ರತಾ ಠೇವಣಿ ಹಣವನ್ನು ಹಿಂತಿರುಗಿಸಲಾಗುವುದು.
8. ಕಾಮಗಾರಿಗೆ ಉಪಯೋಗಿಸುವ ಎಲ್ಲಾ ಸಾಮಾಗ್ರಿಗಳು ಉತ್ತಮ ಗುಣಮಟ್ಟದ್ದಾಗಿರಬೇಕು ಹಾಗೂ ಸಾಮಾಗ್ರಿಗಳ ಗುಣಮಟ್ಟ ಪರೀಕ್ಷೆಯನ್ನು ಸಂಬಂಧಪಟ್ಟ ಇಲಾಖೆಯ ಅಧಿಕೃತ ನಿಯಂತ್ರಣ ಪರಿವೀಕ್ಷಕರಿಂದ ಗುಣ ಮಟ್ಟದ ಪರವೀಕ್ಷಣೆ ಮಾಡಿಸಿ ಗುಣಮಟ್ಟದ ಬಗ್ಗೆ ದೃಢೀಕೃತ ಪತ್ರಗಳನ್ನು ತಮ್ಮ ಸ್ವಂತ ಖರ್ಚಿನಲ್ಲಿ ಮಾಡಿಸಿ ಗುಣಮಟ್ಟ ಪರೀಕ್ಷೆ ವರದಿಯನ್ನು ಸಲ್ಲಿಸುವುದು. ಕಾಂಕ್ರೀಟ್ ಕೆಲಸಗಳಿಗೆ ಕಡ್ಡಾಯವಾಗಿ ವೈಬ್ರೇಟರ್ ಉಪಯೋಗಿಸುವುದು.
9. ಕಾಮಗಾರಿಯನ್ನು ಯಶಸ್ವಿಯಾಗಿ ನಿರ್ವಹಿಸಲು ಅವಶ್ಯಕವಾಗಿ ಬೇಕಾಗಿರುವ ಯಂತ್ರೋಪಕರಣಗಳು ಹಾಗೂ ಇತರೇ ಸಾಮಾಗ್ರಿಗಳನ್ನು ಗುತ್ತಿಗೆದಾರರು ಒದಗಿಸಿಕೊಳ್ಳುವುದು.
10. ಟೆಂಡರ್ ರದ್ದಾದಲ್ಲಿ ಟೆಂಡರ್ ಅರ್ಜಿ ಶುಲ್ಕವನ್ನು ಹಿಂದಿರುಗಿಸಲಾಗುವುದಿಲ್ಲ ಹಾಗೂ ಬೇರೆ ಕೆಲಸಕ್ಕೆ ವರ್ಗಾಹಿಸುವಂತಿಲ್ಲ.
11. ಕಾಮಗಾರಿ ನಿರ್ವಹಿಸುವ ಸಮಯದಲ್ಲಿ ಯಾವುದೇ ಖಾಸಗಿ/ಸಾರ್ವಜನಿಕ ಆಸ್ತಿಗೆ/ಜೀವಹಾನಿ ಸಂಭವಿಸಿದಲ್ಲಿ ಅದರ ಪರಿಹಾರವನ್ನು ಗುತ್ತಿಗೆದಾರರೇ ಭರಿಸಬೇಕಾಗುತ್ತದೆ.
12. ಟೆಂಡರನ್ನು ಇ-ಟೆಂಡರಿಂಗ್ ಮುಖಾಂತರ ಮಾತ್ರ ನಿರ್ವಹಿಸಲಾಗುವುದು. ವಿವರಗಳಿಗೆ www.tenderwizard.com/DUDCKB ರಲ್ಲಿ ಸಂಪರ್ಕಿಸಬಹುದಾಗಿದೆ ಅಥವಾ ಕಿಯೋನಿಕ್ಸ್ ಸಂಸ್ಥೆಯ **9686115314, 080-40482000** ಹಾಗೂ **080-40482105** ನಂಬರನ್ನು ಸಂಪರ್ಕಿಸಬಹುದು.
13. ಸರ್ಕಾರದಿಂದ ಬಿಡುಗಡೆಯಾಗುವ ಅನುದಾನಕ್ಕೆ ಅನುಗುಣವಾಗಿ ಹಣದ ಲಭ್ಯತೆಯನ್ನು ಅನುಸರಿಸಿ ಗುತ್ತಿಗೆದಾರರಿಗೆ ಬಿಲ್ ಪಾವತಿ ಮಾಡಲಾಗುವುದು.
14. ಗುತ್ತಿಗೆದಾರರ ಟೆಂಡರ್ ಕರೆಗಳಿಗೆ ಒಂದು ವರ್ಷ (ಟೆಂಡರ್ ತೆರೆದ ದಿನಾಂಕದಿಂದ) ಅವಧಿಯ ಸಿಂಧುತ್ವ ಹೊಂದಿರುತ್ತದೆ.
15. ಕಾಮಗಾರಿಗಳು ಪೂರ್ಣಗೊಂಡ ನಂತರ ಮೂರನೇ ಪಾರ್ಟಿಯಿಂದ ಕಾಮಗಾರಿಯ ಗುಣಮಟ್ಟದ ಬಗ್ಗೆ ದೃಢೀಕರಣ ಪತ್ರ ಸಲ್ಲಿಸಿದ ನಂತರ ಬಿಲ್ ಪಾವತಿಗೆ ಕ್ರಮ ಕೈಗೊಳ್ಳಲಾಗುವುದು.

16. ಮೇಲ್ಕಂಡ ಎಲ್ಲಾ ಷರತ್ತುಗಳನ್ನು ಪಾಲಿಸದೇ ಇದ್ದ ಪಕ್ಷದಲ್ಲಿ ಇ.ಎಂ.ಡಿ./ಭದ್ರತಾ ಠೇವಣಿ ಹಣವನ್ನು ಮುಟ್ಟುಗೋಲು ಹಾಕಿಕೊಂಡು ಟೆಂಡರನ್ನು ವಜಾ ಮಾಡಲಾಗುವುದು.
17. ಕಾಮಗಾರಿಯ ಮುನ್ನ, ಪ್ರಗತಿ ವೇಳೆ, ಪೂರ್ಣಗೊಂಡ ನಂತರದ ವಿವಿಧ ಹಂತಗಳ ಒಂದೆ ಸ್ಥಳ ಹಾಗು ಅದೇ ಕೋನಗಳಿಂದ ತೆಗೆದ ಛಾಯ ಚಿತ್ರಗಳನ್ನು ಗುತ್ತಿಗೆದಾರರು ನೀಡಬೇಕಾಗುತ್ತದೆ.
18. ಯಾವುದೇ ಕಾರಣ ನೀಡದೆ ಯಾವುದೇ ಅಥವಾ ಎಲ್ಲಾ ಟೆಂಡರ್‌ಗಳನ್ನು ತಿರಸ್ಕರಿಸುವ ಹಕ್ಕನ್ನು ಸಕ್ಷಮ ಪ್ರಾಧಿಕಾರ ಕಾಯ್ದಿರಿಸಿಕೊಂಡಿರುತ್ತಾರೆ.
19. ಹೆಚ್ಚಿನ ಮಾಹಿತಿಗಳನ್ನು ಕಛೇರಿ ವೇಳೆಯಲ್ಲಿ ಪೌರಾಯುಕ್ತರು/ಸಹಾಯಕ ಕಾರ್ಯಪಾಲಕ ಅಭಿಯಂತರರು, ನಗರಸಭೆ, ಸಹಾಯಕ ಕಾರ್ಯಪಾಲಕ ಅಭಿಯಂತರರು, ಜಿಲ್ಲಾನಗರಾಭಿವೃದ್ಧಿ ಕೋಶ, ಚಿಕ್ಕಬಳ್ಳಾಪುರ ರವರಿಂದ ಪಡೆಯಬಹುದಾಗಿದೆ.

| | | | |
|---|---|---|---|
| (ಬಿ.ಎ.ಲೋಕೇಶ್ ಕುಮಾರ್)<br>ಅಧ್ಯಕ್ಷರು<br>ನಗರಸಭೆ, ಚಿಕ್ಕಬಳ್ಳಾಪುರ | (ಸಿ.ಮಂಜುಳ ಕೃಷ್ಣಪ್ಪ)<br>ಉಪಾಧ್ಯಕ್ಷರು<br>ನಗರಸಭೆ, ಚಿಕ್ಕಬಳ್ಳಾಪುರ | (ವಿ.ವೆಂಕಟೇಶ್)<br>ಸ್ಥಾಯಿ ಸಮಿತಿ ಅಧ್ಯಕ್ಷರು<br>ನಗರಸಭೆ, ಚಿಕ್ಕಬಳ್ಳಾಪುರ | (ಕೆ.ಎಲ್.ಬಸವರಾಜು)<br>ಪೌರಾಯುಕ್ತರು<br>ನಗರಸಭೆ, ಚಿಕ್ಕಬಳ್ಳಾಪುರ |

ಪೌರಾಯುಕ್ತರು
ನಗರಸಭೆ, ಚಿಕ್ಕಬಳ್ಳಾಪುರ